aglasem.com

FOR KARNATAKA CLASS 11 PREPARATION

Karnataka 1st PUC Model Question Paper 2027 for Logic (Paper 2, Kannada Medium)

EXAM	YEAR	TYPE	SUBJECT
Karnataka Class 11	2027	Sample Paper	Logic

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

ಪ್ರಥಮ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ – 2

ವಿಷಯ: ತರ್ಕಶಾಸ್ತ್ರ (23)

ಸಮಯ: 03 ಗಂಟೆಗಳು **ಒಟ್ಟುಪ್ರಶ್ನೆಗಳಸಂಖ್ಯೆ: 43** **ಗರಿಷ್ಠಅಂಕಗಳು: 80**

ಸೂಚನೆಗಳು :

1. **ಮುಖ್ಯ ಪ್ರಶ್ನೆ ಮತ್ತು ಉಪ ಪ್ರಶ್ನೆಗಳ ಸಂಖ್ಯೆಯನ್ನು ಸ್ಪಷ್ಟವಾಗಿ ಬರೆಯಿರಿ.**
2. **ವಿಭಾಗ– ಎ ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯ ಮಾಪನದಲ್ಲಿ ಪರಿಗಣಿಸಲಾಗುವುದು.**

ಭಾಗ–ಎ

I. ಈ ಕೆಳಗಿನ ಬಹು ಆಯ್ಕೆ ಪ್ರಶ್ನೆಗಳಿಗೆ ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ 5x1=5

1. ಗೊತ್ತಿರುವ ಸಂಗತಿಯಿಂದ ಗೊತ್ತಿಲ್ಲದೆ ಇರುವ ಸಂಗತಿಗಳ ಕಡೆಗೆ ಹೋಗುವ ಮಾನಸಿಕ ಪ್ರಕ್ರಿಯೆ
   ಅ) ನಿಗಮನ ಆ) ವಿಗಮನ ಇ) ಅನುಮಾನ ಈ) ಮೇಲಿನ ಯಾವುದೂ ಅಲ್ಲ

2. ವಿಚಾರವು ಇದರ ವಾಹಕವಾಗಿದೆ.
   ಅ) ನಿಗಮನ ಆ) ತರ್ಕಶಾಸ್ತ್ರ ಇ) ಭಾಷೆ ಈ) ವಿಗಮನ

3. ತರ್ಕವಾಕ್ಯದಲ್ಲಿ ಇರುವ ಪದಗಳು
   1) ಪಕ್ಷ ಪದ 2) ಸಾಧ್ಯ ಪದ 3) ಉದ್ದೇಶಪದ 4) ವಿಧೇಯಪದ
   ಅ) 1 ಮತ್ತು 2 ಆ) 2 ಮತ್ತು 3 ಇ) 3 ಮತ್ತು 4 ಈ) 4 ಮತ್ತು 1

4. ಪದಗಳ ವ್ಯಾಪ್ತಿಗೆ ಸಂಕೇತಗಳು
   ಅ) . ~ ಆ) V X ಇ) V ⊃ ಈ) V ~

5. ಒಂಟೆಯು ಮರುಳುಗಾಡಿನ ಹಡಗು ಎಂಬುದು ಕೆಳಕಂಡ ದೋಷಕ್ಕೆ ಉದಾಹರಣೆಯಾಗಿದೆ.
   ಅ) ನಿಷೇದಾತ್ಮಕ ವ್ಯಾಖ್ಯೆಯ ದೋಷ
   ಆ) ಪರ್ಯಾಯ ವ್ಯಾಖ್ಯೆಯ ದೋಷ
   ಇ) ಅಲಂಕಾರ ವ್ಯಾಖ್ಯೆಯ ದೋಷ
   ಈ) ಕ್ಲಿಷ್ಟ ವ್ಯಾಖ್ಯೆಯ ದೋಷ

III. ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದ ಒಂದನ್ನು ಬಳಸಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿ 5x1=5
(ನಿರ್ಣಯ, ಆದರೆ, ಭಾಷೆ, ಕ್ಲಿಷ್ಟ ವ್ಯಾಖ್ಯೆ, ಅತಿ ವ್ಯಾಪಕ ಭಾಷೆ, ಆಲೋಚನೆ)

6. ತರ್ಕಶಾಸ್ತ್ರದ ವಸ್ತು ವಿಷಯ_____
7. ತರ್ಕಶಾಸ್ತ್ರದಲ್ಲಿ _____ ಇಲ್ಲದೆ ವಿಚಾರವಿಲ್ಲ.
8. _____ ಒಂದು ಮಾನಸಿಕ ಕ್ರಿಯೆ
9. ಕಾಲ್ಪನಿಕ ತರ್ಕವಾಕ್ಯವು _____ ಪದದಿಂದ ಜೋಡಿಸಲ್ಪಟ್ಟಿದೆ.
10. ತಾರ್ಕಿಕ ವಾಖ್ಯೆಯು ಅಸ್ಪಷ್ಟ ಅಥವಾ ಕ್ಲಿಷ್ಟವಾದ ತರ್ಕಪದಗಳನ್ನು ಒಳಗೊಂಡಿದ್ದರೆ ಅದು _____ ದೋಷಕ್ಕೆ ಒಳಗಾಗುತ್ತದೆ.

III. ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ 5x1=5

	A	B
11.	ಎ) ಅರಿಸ್ಟಾಟಲ್	1) ಪುಸ್ತಕ
	ಬಿ) ವರ್ಣನಾತ್ಮಕ ಭಾಷೆ	2) ಅತಿವ್ಯಾಪಕ ವ್ಯಾಖ್ಯೆ
	ಸಿ) ವಸ್ತು ವಾಚಕ	3) ಆಲೋಚನೆಯ ನಿಯಮ
	ಡಿ) ಮಾನವ ಪ್ರಾಣಿಯಾಗಿದ್ದಾನೆ	4) ವಸ್ತು ವಿಷಯವನ್ನು ವರ್ಣಿಸುವುದು

ಇ) ಅನನ್ಯತಾ ನಿಯಮ

5) ತರ್ಕಶಾಸ್ತ್ರದ ಪಿತಾಮಹ

6) ತರ್ಕದೋಷ

IV. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ **5x1=5**

12. ಅನುಮಾನ ಎಂದರೇನು?
13. ಭಾಷೆಯನ್ನು ಹೇಗೆ ಬಳಸಬಹುದು ಎಂಬುದನ್ನು ಕಂಡು ಹಿಡಿದವರು ಯಾರು?
14. ವಾಕ್ಯ ಎಂದರೇನು?
15. ತಾರ್ಕಿಕ ವ್ಯಾಖ್ಯೆ ಎಂದರೇನು?
16. ಭಾರತೀಯ ತರ್ಕಶಾಸ್ತ್ರದ ಪಿತಾಮಹ ಯಾರು?

:: ಭಾಗ–ಬಿ ::

V.ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಉತ್ತರಿಸಿ **10x2=20**

17. ಆಲೋಚನೆಯ ರೂಪ ಮತ್ತು ವಸ್ತು ವಿಷಯ ಎಂದರೇನು?
18. ಸಮಂಜಸತೆ ಎಂದರೇನು?
19. ಆದರ್ಶ ನಿಧಾರಕ ಶಾಸ್ತ್ರಗಳನ್ನು ಹೆಸರಿಸಿ
20. ಭಾವನಾತ್ಮಕ ಭಾಷೆ ಎಂದರೇನು? ಉದಾಹರಣೆ ಕೊಡಿ.
21. ನಿಷೇದಾತ್ಮಕ ಪದ ಎಂದರೇನು? ಉದಾಹರಣೆ ಕೊಡಿ
22. ಭಾವನಾತ್ಮಕ ಪದ ಎಂದರೇನು? ಉದಾಹರಣೆ ಕೊಡಿ
23. ತರ್ಕಶಾಸ್ತ್ರದ ಭಾಗಗಳು ಯಾವುವು?
24. ಸಾಪೇಕ್ಷ ವಾಕ್ಯದ ಎರಡು ವಿಧಗಳನ್ನು ಬರೆಯಿರಿ
25. A, E, I, O ಗಳನ್ನು ವಿವರಿಸಿ
26. ಬೆಳಕು ಕತ್ತಲೆಯಲ್ಲ ಈ ದೋಷಗಳನ್ನು ಹೆಸರಿಸಿ
27. ಮಾನವನೆಂದರೆ ಮಾನವೀಯತೆ ಇರುವವನು ಈ ದೋಷವನ್ನು ವಿವರಿಸಿ
28. ವೈಕಲ್ಪಕತೆ ಎಂದರೇನು?
29. ಆಲೋಚನೆಯ ಮೂಲ ನಿಯಮಗಳ ವಿಧಗಳನ್ನು ಹೆಸರಿಸಿ
30. ಭಾರತೀಯ ತರ್ಕಪರಂಪರೆಯಲ್ಲಿ ಜ್ಞಾನದ ವಿಧಗಳನ್ನು ತಿಳಿಸಿ
31. ಸದ್–ಸತ್ ಹೇತುವಿನ ಮೂರು ಲಕ್ಷಣಗಳನ್ನು ವಿವರಿಸಿ

:: ಭಾಗ–ಸಿ ::

VI. ಕೆಳಗಿನ ಯಾವುದಾದರೂ ನಾಲ್ಕು ವಾದಗಳ ಸಮಂಜಸತೆಯನ್ನು ಪರಿಶೀಲಿಸಿ ಮತ್ತು ವಿವರಿಸಿ **4x5=20**

32. ನನ್ನ ಕೈ ಕುರ್ಚಿನ್ನು ಮುಟ್ಟಿತ್ತದೆ
    ಕುರ್ಚಿ ನೆಲವನ್ನು ಮುಟ್ಟುತ್ತದೆ
    ನನ್ನ ಕೈ ನೆಲವನ್ನು ಮುಟ್ಟುತ್ತದೆ.
33. ಎಲ್ಲಾ ವೈದ್ಯರು ಪ್ರಾಮಾಣಿಕರು
    ಎಲ್ಲಾ ಶಿಕ್ಷಕರು ಪ್ರಾಮಾಣಿಕರು
    ಎಲ್ಲಾ ಶಿಕ್ಷಕರು ವೈದ್ಯರು
34. ಎಲ್ಲಾ ನಾಯಿಗಳು ಚತುಷ್ಪಾದಿಗಳು.
    ಯಾವ ನಾಯಿಗಳೂ ಹಸುಗಳಲ್ಲ.
    ಯಾವ ಹಸುಗಳೂ ಚತುಷ್ಪಾದಿಗಳಲ್ಲ.

35. ಯಾವ ಮಾನವರು ಪರಿಪೂರ್ಣರಲ್ಲ
ಎಲ್ಲಾ ಮಾನವರು ಪ್ರಾಣಿಗಳು
ಯಾವ ಪ್ರಾಣಿಗಳು ಪರಿಪೂರ್ಣರಲ್ಲ

36. ಮಳೆ ಬಂದರೆ ಭೂಮಿಯು ತಣ್ಣಗಿರುತ್ತದೆ.
ಮಳೆ ಬಂದಿಲ್ಲ.
ಭೂಮಿಯು ತಣ್ಣಗಿಲ್ಲ.

37. ಮಳೆ ಬಂದರೆ ಭೂಮಿ ತಣ್ಣಗಿರುತ್ತದೆ
ಭೂಮಿ ತಣ್ಣಗಿದೆ
ಮಳೆ ಬಂದಿದೆ.

:: ಭಾಗ–ಡಿ ::

VII. ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ **2x5=10**

38. ತರ್ಕಶಾಸ್ತ್ರದ ಉಪಯೋಗಗಳನ್ನು ಬರೆಯಿರಿ
39. ವ್ಯಾಕರಣ ವಾಕ್ಯಕ್ಕೂ ತರ್ಕವಾಕ್ಯಕ್ಕೂ ಇರುವ ವ್ಯತ್ಯಾಸಗಳನ್ನು ವಿವರಿಸಿ
40. ಸೂಚಕತೆಯ ಸತ್ಯತಾ ಕೋಷ್ಟಕವನ್ನು ವಿವರಿಸಿ
41. ಭಾರತೀಯ ಅನುಮಾನದ ಪಂಚಾಯವಗಳನ್ನು ವಿವರಿಸಿ

:: ಭಾಗ–ಇ ::

VIII. ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ **1x10=10**

42. ನಿರಪೇಕ್ಷ ತಾರ್ಕಿಕ ವಾಕ್ಯಗಳ ಪದಗಳ ವ್ಯಾಪ್ತಿ ಮತ್ತು ಅವ್ಯಾಪ್ತಿಯನ್ನು ಯೂಲರ್ಸ್‌ನ ವೃತ್ತದ ಮೂಲಕ ವಿವರಿಸಿ
43. A, E, I, O ತಾರ್ಕಿಕ ವಾಕ್ಯವನ್ನು ನಿಯಮಗಳೊಂದಿಗೆ ಪರಿವರ್ತಿಸಿ ಮತ್ತು ಪ್ರತಿವರ್ತಿಸಿ